**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 709 |
| **ಸದಸ್ಯರ ಹೆಸರು** | : | ಶ್ರೀ ಎಸ್.ವ್ಹಿ.ಸಂಕನೂರ<br>(ಪದವೀಧರರ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 12.03.2025 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪಶ್ಚಿಮ ಕರಾವಳಿ ಎಷ್ಟು ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿದೆ ಹಾಗೂ ಈ ವ್ಯಾಪ್ತಿಯಲ್ಲಿ ನಿರ್ಮಾಣವಾದ ಬಂದರುಗಳ ಸಂಖ್ಯೆ ಎಷ್ಟು ಹಾಗೂ ನಿರ್ಮಾಣಗೊಂಡಿರುವ ಸ್ಥಳಗಳು ಯಾವುವು: (ಸಂಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದ ಕರಾವಳಿಯು 320 ಕಿ.ಮೀ. ಉದ್ದದ ವ್ಯಾಪ್ತಿಯನ್ನು ಹೊಂದಿದೆ. ಈ ವ್ಯಾಪ್ತಿಯಲ್ಲಿ ಒಟ್ಟು 13 ಕಿರು ಬಂದರುಗಳಿದ್ದು, ಈ ಕೆಳಗಿನ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.<br>1. ಕಾರವಾರ \| 8. ಭಟ್ಕಳ<br>2. ಬೇಲೇಕೇರಿ \| 9. ಕುಂದಾಪುರ<br>3. ಕೇಣಿ \| 10. ಹಂಗಾರಕಟ್ಟಾ<br>4. ತದಡಿ \| 11. ಮಲ್ಪೆ<br>5. ಪಾವಿನಕುರ್ವೆ \| 12. ಪಡುಬಿದ್ರಿ<br>6. ಹೊನ್ನಾವರ \| 13. ಹಳೇ ಮಂಗಳೂರು<br>7. ಮಂಕಿ |
| ಆ) | ಬಂದರು ಹಾಗೂ ಕಟ್ಟೆ ನಿರ್ಮಾಣವಲ್ಲದೆ ತಡೆಗೋಡೆ ನಿರ್ಮಾಣದಿಂದ ಸಾಂಪ್ರದಾಯಿಕ ಮೀನುಗಾರಿಕೆಗೆ ತೊಂದರೆಯಾಗಿದೆಯೆಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬಂದರು ಹಾಗೂ ಕಟ್ಟೆ ನಿರ್ಮಾಣವಲ್ಲದೆ ತಡೆಗೋಡೆ ನಿರ್ಮಾಣದಿಂದ ಸಾಂಪ್ರದಾಯಿಕ ಮೀನುಗಾರಿಕೆಗೆ ತೊಂದರೆಯಾಗಿದೆ ಎಂದು ಇದುವರೆವಿಗೂ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ |
| ಇ) | ಸಾಂಪ್ರದಾಯಿಕ ಮೀನುಗಾರಿಕೆಗೆ ತೊಂದರೆಯಾದ ಬಗ್ಗೆ ಇಲಾಖೆ ಅಧ್ಯಯನ ನಡೆಸಿ ಅವರಿಗೆ ಸೂಕ್ತ ಪರಿಹಾರ ನೀಡುವ ಕ್ರಮ ಕೈಗೊಂಡಿದೆಯೇ: (ಈ ಕುರಿತು ವಿವರವಾದ ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ |
| ಈ) | ಯಾಂತ್ರಿಕ ದೋಣಿ ನಡೆಸುವ ಮೀನುಗಾರರಿಗೆ ವರ್ಷದಲ್ಲಿ ಮಳೆಗಾಲದ ಸಂದರ್ಭದಲ್ಲಿ ಒಂದೂವರೆ ತಿಂಗಳು ಮೀನು ಹಿಡಿಯದಂತೆ (ಮೀನುಗಾರಿಕೆ ರಜೆ) ನಿರ್ಬಂಧನೆ ಮಾಡಿ ಸರ್ಕಾರ ಆದೇಶ ಹೊರಡಿಸುವುದು ನಿಜವೇ: | ಮಳೆಗಾಲದಲ್ಲಿ ಪಶ್ಚಿಮ ಕರಾವಳಿಯಾದ್ಯಂತ ಪ್ರತಿ ವರ್ಷ ಜೂನ್ 01 ರಿಂದ ಜುಲೈ 31 ರವರಗೆ(ಉಭಯ ದಿನಗಳು ಸೇರಿ) 61 ದಿನಗಳ ಮೀನುಗಾರಿಕೆ ನಿಷೇಧ ಮಾಡಿ ಮೀನುಗಾರಿಕೆ ರಜೆ ಎಂದು ಘೋಷಿಸಲಾಗುತ್ತಿದೆ. |

| | | |
|---|---|---|
| ಉ) | ಮೀನುಗಾರಿಕೆಗೆ ನಿರ್ಬಂಧ ಹೇರಿರುವ ಹಿನ್ನಲೆಯಲ್ಲಿ ಅಂತವರಿಗೆ ಪರಿಹಾರ ಕ್ರಮಗಳನ್ನು ಸರ್ಕಾರ ಕೈಗೊಂಡಿದೆಯೇ? | ಮೀನುಗಾರಿಕೆ ನಿಷೇಧದ ಅವಧಿಯಲ್ಲಿ "ಉಳಿತಾಯ ಮತ್ತು ಪರಿಹಾರ" ಯೋಜನೆಯಡಿ ನೋಂದಾಯಿಸಿಕೊಂಡ ಮೀನುಗಾರರಿಗೆ ಪರಿಹಾರ ನೀಡಲಾಗುತ್ತಿದೆ. |

**IDD 22 PSP 2025**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**